ಕರ್ನಾಟಕ ಸರ್ಕಾರ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ
ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ದೂರವಾಣಿ ಸಂಖ್ಯೆ : 080 – 29753340 e-mail ID : citeadmission@gmail.com

ಸಂ.ಕೈತಉಇ/ತರಬೇತಿ/ತ-1/ವಿವ-10/2024-25 ದಿನಾಂಕ: 28-05-2025.

**ಸುತ್ತೋಲೆ**

**ವಿಷಯ:** 2025 ರ ಪ್ರವೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 29-05-2025 ರಿಂದ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳ ಅರ್ಜಿಗಳನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸ್ವೀಕರಿಸುವ ಬಗ್ಗೆ.

**ಉಲ್ಲೇಖ :** 1. ದಿನಾಂಕ : 07-05-2025 ರ ಸಮಸಂಖ್ಯೆ ಅಧಿಸೂಚನೆ ಮತ್ತು 2025 ರ ಪ್ರವೇಶಕ್ಕೆ ಸಂಬಂಧಿಸಿದ ತಾತ್ಕಾಲಿಕ ವೇಳಾಪಟ್ಟಿ.
2. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ : 28-05-2025

<<>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ವೇಳಾಪಟ್ಟಿಯನ್ವಯ 2025 ರ On line ಪ್ರವೇಶದ ಸಂಬಂಧ ಇಲಾಖೆಯ ವೆಬ್‌ಸೈಟ್ **www.cite.karnataka.gov.in** ರಲ್ಲಿ ಅರ್ಜಿ ಸಲ್ಲಿಸಲು ದಿನಾಂಕ : 28-05-2025 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. On line ನಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಮೊದಲನೇ ಸುತ್ತಿನ ಸ್ಥಾನ ಹಂಚಿಕೆ ಹಾಗೂ ಪ್ರವೇಶ ನಂತರ ಖಾಲಿ ಉಳಿದ ಸ್ಥಾನಗಳ ವಿವರಗಳನ್ನು ದಿನಾಂಕ: 11-06-2025 ರಂದು ಪ್ರಕಟಿಸಲಾಗುವುದು. ಸದರಿ ಸ್ಥಾನಗಳಿಗೆ ದಿನಾಂಕ: 12-06-2025 ರಿಂದ ದಿನಾಂಕ: 31-08-2025 ರವರೆಗೆ Offline ನಲ್ಲಿ Merit ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ತಿಳಿಸಲಾಗಿದೆ.

ಮುಂದುವರೆದು ದಿನಾಂಕ : 29-05-2025 ರಿಂದ ಸಂಸ್ಥೆಗಳಲ್ಲಿ ಪ್ರತಿದಿನ ಅಭ್ಯರ್ಥಿಗಳು ಸಲ್ಲಿಸುವ ಅರ್ಜಿಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಿ ಸ್ವೀಕರಿಸತಕ್ಕದ್ದು. ಈ ರೀತಿ ಸ್ವೀಕರಿಸುವ ಅರ್ಜಿಗಳನ್ನು ದಿನಾಂಕ: 12-06-2025 ರಂದು ನಿಯಮಾನುಸಾರ ಮೆರಿಟ್ ಆಧಾರದಲ್ಲಿ ಉಳಿದ ಸ್ಥಾನಗಳಿಗೆ ಭರ್ತಿ ಮಾಡಿಕೊಳ್ಳಲು ಸೂಚಿಸಲಾಗಿದೆ. ನಂತರ ದಿನಾಂಕ: 12-06-2025 ರಿಂದ ಪ್ರತಿ ದಿನ ಸ್ವೀಕರಿಸಲಾಗುವ ಅರ್ಜಿಗಳನ್ನು ಮಾರನೇ ದಿನ ನಿಯಮಾನುಸಾರ ಮೆರಿಟ್ ಆಧಾರದಲ್ಲಿ ಉಳಿದ ಸ್ಥಾನಗಳಿಗೆ ಭರ್ತಿ ಮಾಡಿಕೊಳ್ಳಲು ಹಾಗೂ ಈ ಪ್ರವೇಶ ಪ್ರಕ್ರಿಯೆಯನ್ನು DGT, ನವದೆಹಲಿ, ಇವರ ಪತ್ರದನ್ವಯ ಪ್ರವೇಶದ ಅಂತಿಮ ದಿನಾಂಕ : 31-08-2025 ರವರೆಗೆ ಪ್ರತಿ ದಿನ ನಿರ್ವಹಿಸುವುದು. ಈ ರೀತಿ ಸ್ವೀಕರಿಸುವ ಭೌತಿಕ ಅರ್ಜಿಗಳ ಮೆರಿಟ್ ಆಧಾರದ ಪ್ರವೇಶದಲ್ಲಿ ಯಾವುದೇ ಗೊಂದಲಗಳಿಲ್ಲದಂತೆ, ಪೂರ್ಣ ಪಾರದರ್ಶಕವಾಗಿ ನಿರ್ವಹಿಸುವುದು ಹಾಗೂ ಪ್ರತಿ ದಿನದ ಪ್ರವೇಶ ಪೂರ್ಣಗೊಂಡ ನಂತರ ವೃತ್ತಿವಾರು ಆಯಾ ಸಂಸ್ಥೆಯಲ್ಲಿ ಉಳಿದ ಸ್ಥಾನಗಳನ್ನು Notice Boardನಲ್ಲಿ ಪ್ರಕಟಿಸುವುದು. ಈ ಸಂಬಂಧ Email ಮುಖಾಂತರ ವಿಭಾಗೀಯ ಜಂಟೀ ನಿರ್ದೇಶಕರುಗಳು ತಮ್ಮ ವಿಭಾಗೀಯ ವ್ಯಾಪ್ತಿಗೊಳಪಡುವ ಸಂಸ್ಥೆಗಳಿಂದ ಆಯಾ ದಿನದ ಪ್ರವೇಶದ ನಂತರ ಉಳಿದಿರುವ ಸ್ಥಾನಗಳ ವಿವರಗಳನ್ನು ಸಂಸ್ಥೆ / ವೃತ್ತಿವಾರು ಕ್ರೋಢೀಕರಿಸಿ ಮಾರನೇ ದಿನ ಆಯುಕ್ತಾಲಯಕ್ಕೆ Email ಮುಖಾಂತರ ಲಗತ್ತಿಸಿರುವ ನಮೂನೆಯಲ್ಲಿ ತಪ್ಪದೇ ಸಲ್ಲಿಸುವುದು.

ದಿನಾಂಕ: 12-06-2025 ರಿಂದ ನಡೆಸಲಾಗುವ Offline ಪ್ರವೇಶಗಳಿಗೆ ಸಂಬಂಧಿಸಿದಂತೆ Merit ಅನ್ನು ಪಾಲಿಸದೇ ಯಾವುದೇ ಪ್ರವೇಶವನ್ನು ಪ್ರಾಚಾರ್ಯರು ಮಾಡುವಂತಿಲ್ಲ. ಈ ಬಗ್ಗೆ ವಿಭಾಗೀಯ ಕಛೇರಿ ಜಂಟೀ ನಿರ್ದೇಶಕರು ಪ್ರಾಚಾರ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ನಿಯಮಾನುಸಾರ ಪ್ರವೇಶ ಕಾರ್ಯ ನಡೆಸುವುದನ್ನು ಖಚಿತಪಡಿಸುವುದು. ಈ ರೀತಿ ಭೌತಿಕ ಅರ್ಜಿಗಳ ಪ್ರವೇಶ ಕಾರ್ಯದಲ್ಲಿ SSLC ಪೂರಕ ಪರೀಕ್ಷೆಯ ಅಭ್ಯರ್ಥಿಗಳು ಮತ್ತು ಈಗಾಗಲೇ Online ನಲ್ಲಿ ಅರ್ಜಿ ಸಲ್ಲಿಸಿ ಸೀಟು ಪಡೆಯದ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಆಯಾ ದಿನದಲ್ಲಿ ಲಭ್ಯವಿರುವ ಸ್ಥಾನಗಳಿಗನುಸಾರ ಪ್ರವೇಶ ಮಾಡಿಕೊಳ್ಳುವುದು. ಸದರಿ ಪ್ರವೇಶ ಪ್ರಕ್ರಿಯೆಯನ್ನು ದಿನಾಂಕ: 31-08-2025 ರವರೆಗೆ ನಡೆಸಿ ಸಂಯೋಜನೆ ಹೊಂದಿರುವ ಎಲ್ಲಾ ವೃತ್ತಿಗಳನ್ನು ಭರ್ತಿ ಮಾಡುವುದು ಹಾಗೂ ಈ ರೀತಿ ಭೌತಿಕ ಅರ್ಜಿ ಆಧಾರದಲ್ಲಿ ಪ್ರವೇಶ ಪಡೆದ ಎಲ್ಲಾ ಭೌತಿಕ ಅರ್ಜಿಗಳ ವಿವರಗಳನ್ನು ಇಲಾಖೆಯ ವೆಬ್‌ಸೈಟ್ **www.cite.karnataka.gov.in** ರಲ್ಲಿ ಆಯಾ ಸಂಸ್ಥೆಗಳ Login ನಲ್ಲಿ ಅದೇ ದಿನ ಭರ್ತಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಭೌತಿಕ ಅರ್ಜಿಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ದಿನಾಂಕ: 06-09-2025 ರಂದು ವರದಿ ನೀಡಲು ಸೂಚಿಸಲಾಗಿದೆ.

ಆಯುಕ್ತರು,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

ಇವರಿಗೆ,

ಜಂಟೀ ನಿರ್ದೇಶಕರು (ತರಬೇತಿ),
ವಿಭಾಗೀಯ ಕಛೇರಿ,
ಬೆಂಗಳೂರು / ಮೈಸೂರು / ಕಲಬುರಗಿ / ಹುಬ್ಬಳ್ಳಿ,

# 2025 ADMISSION (OFFLINE) DETAILS - DAYWISE

| SL. NO | DIVISION | DISTRICT | NAME OF THE GOVT. ITI | MIS CODE | NAME OF THE TRADE | Date: | | | | Date: | | | |
|---|---|---|---|---|---|---|---|---|---|---|---|---|---|
| | | | | | | VACANCY OF SEATS AVAILABLE | TOTAL APPLICATION RECEIVED | ADMITTED | BALANCE SEATS AVAILABLE | VACANCY OF SEATS AVAILABLE | TOTAL APPLICATION RECEIVED | ADMITTED | BALANCE SEATS AVAILABLE |
| | | | | | | | | | | | | | |
| | | | | | | | | | | | | | |
| | | | | | | | | | | | | | |

Joint Director (TRG)

________________ Division